# 9

# ಸ್ಥಿರ ಚಿತ್ತದಿಂದ ಇರುವದು ಹೇಗೆ

## (ಅಧ್ಯಾಯ 12)

ಗತಿಸಿಹೋದ ತಿಂಗಳುಗಳು ಅಥವಾ ವರ್ಷಗಳಲ್ಲಿ, ನಮ್ಮನ್ನು ಅಗಲಿ ಹೋದ ವರನ್ನು ನೆನಪು ಮಾಡಿಕೊಳ್ಳಬಹುದು. ಪ್ರೀತಿ ಪಾತ್ರರನ್ನು ಕಳಕೊಳ್ಳುವದು ದುಃಖದ ಅನುಭವವಾಗಿರುತ್ತದೆ, ಹಾಗೂ ಸಭೆಯಲ್ಲಿಯೂ ನಮ್ಮ ಅನೇಕ ಸಹೋದರ ಸಹೋದರಿ ಯರನ್ನು ಕಳಕೊಂಡಿದ್ದೇವೆ. ಕೆಲವರು ಸಭೆಯಲ್ಲಿ ನಂಬಿಗಸ್ತರಾಗಿದ್ದು, ಪರಲೋಕದ ಹಾದಿಯಲ್ಲಿದ್ದವರು: ಈಗ ನಂಬಿಕೆಯಲ್ಲಿ ಇರುವದಿಲ್ಲ. ಅಂಥವರು ಬಿದ್ದು ಹೋಗಿ ನಿರಂತರ ನಾಶಕ್ಕೆ ಒಳಗಾಗಿದ್ದಾರೆ. ಕುಟುಂಬದಲ್ಲಿ ಉಂಟಾಗುವ ಮರಣಕ್ಕಿಂತಲೂ, ಭ್ರಷ್ಟತೆಯು ಅತಿ ಘೋರವಾದದ್ದಾಗಿದೆ.

ಹೇಗೂ ನಾವುಗಳು ಮುಂದಿನ ತಿಂಗಳುಗಳಲ್ಲಿ ಉಂಟಾಗಬಹುದಾದ ಸಂಗತಿಗಳ ಬಗ್ಗೆ ಯೋಚಿಸಲೇಬೇಕಲ್ಲವೇ? ನಮ್ಮ ಆತ್ಮೀಕ ಕುಟುಂಬದಲ್ಲಿ ಕೆಲವರು ಬಿದ್ದು ಹೋಗಿ ರುವಂತೆ, ನಾವುಗಳು ಇದ್ದೇವೆಯೇ?

ಇಬ್ರಿಯ ಪುಸ್ತಕವನ್ನು ಯಾರಿಗೆ ಬರೆಯಲಾಯಿತೋ, ಅವರುಗಳಲ್ಲಿ ಸಹ ಇದೇ ವಿಧ ವಾದ ಪ್ರಶ್ನೆಗಳು ಉದ್ಭವಿಸಿದ್ದವು. ಅವರು ಹಿಂಜಾರಿ ಹೋಗುವ ಸಾಧ್ಯತೆಯಿತ್ತು. ವೈರಿಯ ಬೆಂಕಿಯ ಮುಂದೆ ನಡುಗುತ್ತಾ ನಿಂತಿರುವ ಸೈನಿಕರಂತೆ ಅವರು ಇದ್ದರು. ಅವರು ಹಿಂಜರಿದು ಹೋಗದೆ ಭದ್ರವಾದ ಬುನಾದಿಯಲ್ಲಿ ನಿಲ್ಲಬೇಕೆಂಬ ಉದ್ದೇಶದಿಂದ ಇಬ್ರಿಯ ಪುಸ್ತಕವನ್ನು ಬರೆಯಲಾಗಿದೆ.

ಅವರು ಭ್ರಷ್ಟತೆಯನ್ನು ಹೇಗೆ ತಡೆಯಬೇಕಿತ್ತು? ಪರಸ್ಪರ ಉತ್ತೇಜನದಿಂದಲೇ (ಇಬ್ರಿಯ 3:12, 13; 10:24, 25). ಅಂತಿಮವಾಗಿ ಪ್ರತಿ ಕ್ರೈಸ್ತರು ನಂಬಿಕೆಯಿಂದಿರಬೇಕು. ಇದನ್ನು ಹೇಗೆ ಸಾಧಿಸಬಹುದು? ಇಬ್ರಿಯ 12ರಲ್ಲಿ ಇದಕ್ಕೆ ಉತ್ತರವಿದೆ; ಕ್ರೈಸ್ತರು *ಹೇಗೆ ದೃಢವಾಗಿರ ಬೇಕೆಂದು* ತಿಳಿಸಲಾಗಿದೆ.

### ತಾಳ್ಮೆ ಅಥವಾ ಸಹಿಸುವಿಕೆಯನ್ನು ಹೊಂದಿರಬೇಕು

ಸ್ಥಿರ ಚಿತ್ತದಿಂದ ಇರಲು ತಾಳ್ಮೆ ಹಾಗೂ ಸಹಿಸುವಿಕೆಯ ಅಗತ್ಯವಿದೆ (ಇಬ್ರಿಯ 12:1, 2ಎ). ಇಬ್ರಿಯ 11ರಲ್ಲಿ ನಂಬಿಕೆಯಲ್ಲಿ ಪ್ರಮುಖರಾದವರನ್ನು ನಾವು ನೋಡುತ್ತೇವೆ. 12:1ರಲ್ಲಿ, "ಮೇಘದೋಪಾದಿಯಲ್ಲಿರುವ ಸಾಕ್ಷಿಗಳು" ಎನ್ನಲಾಗಿದೆ. ಅವರು ಹೇಗೆ ಸಾಕ್ಷಿ ಹೇಳು ತ್ತಾರೆ? ಅವರು ಈಗಾಗಲೇ ತಮ್ಮ ಓಟವನ್ನು ಕಡೆಗಾಣಿಸಿದ್ದಾರೆ. ಸಂದಿಗ್ಧ ಪರಿಸ್ಥಿತಿಯಲ್ಲೂ ಯಶಸ್ವಿಯಾಗಿದ್ದಾರೆ, ಸಾಕ್ಷಿಯ ಮೂಲಕ ಸಾಧ್ಯತೆಯನ್ನು ತೋರಿದ್ದಾನೆ. ಆದ್ದರಿಂದ ನಾವುಗಳು ಸಹ ಅದನ್ನು ಮಾಡಬಹುದು ಎಂಬ ಸ್ಥಿರ ಚಿತ್ತವನ್ನು ಹೊಂದಿದ್ದೇವೆ.

ಅವರ ನಿದರ್ಶನಗಳನ್ನು ನಾವುಗಳು ಯಾವ ರೀತಿಯಾಗಿ ಅವಲಂಭಿಸಬಹುದು? ಹೌದು ನಮ್ಮ ಜೀವಿತದಲ್ಲಿ ಅಂಟಿಕೊಂಡಿರುವ ಪಾಪವನ್ನು ಬದಿಗಿಟ್ಟು ಓಡುವದರಿಂದಲೇ. ಓಡಿ ಯಶಸ್ಸನ್ನು ಹೇಗೆ ಹೊಂದಬಹುದು? "ತಾಳ್ಮೆಯಿಂದ" (KJV) ಅಥವಾ "ಸಹಿಸಿಕೊಂಡು" (NASB) ಅಥವಾ "ಎಡೆಬಿಡದೆ" (RSV) ಓಡುವದರಿಂದಲೇ. ಕ್ರೈಸ್ತ ಜೀವಿತ ಒಂದು ಓಟದ ಸ್ಪರ್ಧೆಯಂತಿದ್ದರೂ, ಅದು ನೂರಾರು ಮೀಟರ್ ಓಟವಲ್ಲ. ಅದು ಹೆಚ್ಚಿನ ಅಂತರದ ಓಟವಾಗಿದೆ. ಅದರಲ್ಲಿ, ಹೇಗೆ ಜಯಗಳಿಸಬಹುದು? ಪ್ರಯತ್ನ ಪಟ್ಟು ದೃಢವಾಗಿ

ಓಡುವದರಿಂದಲೇ!

ಕ್ರೈಸ್ತ ಜೀವಿತದ ಮಹತ್ವದ ರಹಸ್ಯವೇನು? ಅದರ ದೊಡ್ಡ ವರದಾನವೇನು? ಅದರ ಆಳವಾದ "ಆತ್ಮೀಕ" ಜೀವಿತವೇನು? ಕರ್ತನು ನಿನ್ನಿಂದ ಬಯಸುವದನ್ನು ಮುಂದಿಟ್ಟುಕೊಂಡು, ದಿನೇ ದಿನೇ ಮುಂದುವರೆಯುವದೇ ಆಗಿರುತ್ತದೆ. ಅದನ್ನು ಕಾಪಾಡಿಕೊಳ್ಳುವ ಸಾಮರ್ಥ್ಯವೇ ಆಗಿದೆ, ಸಕಲ ಪರಿಸ್ಥಿತಿಯಲ್ಲೂ ಮುಂದುವರೆಯುವದೇ ಆಗಿರುತ್ತದೆ.

## ಯೇಸುವಿನ ಮೇಲೆ ದೃಷ್ಟಿ ಇಡೋಣ

ಎರಡನೇಯದಾಗಿ ಯೇಸುವಿನ ಮೇಲೆ ದೃಷ್ಟಿ ಇಡುವದರಿಂದ, ಸ್ಥಿರ ಚಿತ್ತರಾಗಿ ಇರಬಹುದು. ಇಬ್ರಿಯ 12:2ಬಿ-4ನ್ನು ಮುಖ್ಯವಾಗಿ, ಹಿಂಸೆಗೊಳಗಾದ ಕ್ರೈಸ್ತರಿಗಾಗಿ ಬರೆಯಲಾಗಿದೆ. ಹಿಂಸೆಗೊಳಗಾದರೂ, ತಂದೆಯಲ್ಲಿ ಸ್ಥಿರ ಚಿತ್ತವನ್ನಿಟ್ಟಿದ್ದ, ಯೇಸು ನಮಗೆ ಅಂತಿಮವಾದ ನಿದರ್ಶನವಾಗಿದ್ದಾನೆ. ಆತನು ಅವಮಾನಕ್ಕೊಳಗಾದರೂ, "ಶಿಲುಬೆಯ ಮರಣವನ್ನು ಸಹಿಸಿಕೊಂಡನು" ಆದಾಗ್ಯೂ ಪಾಪ ಮಾತ್ರ ಮಾಡಲಿಲ್ಲ. ಬಾಧೆಗಳ ನಿಮಿತ್ತವಾಗಿ, ಇತರರಿಗಾಗಿ ರಕ್ಷಣೆಯನ್ನು ಹಾಗೂ ದೇವರಿಂದ ಪ್ರಭಾವವನ್ನು ಹೊಂದಿದನು.

ಯೇಸು ಬೆಲೆಯುಳ್ಳ ನಿದರ್ಶನವಾಗಿದ್ದಾನೆ. ಈಗಾಗಲೇ ಇಬ್ರಿಯ ಓದುಗರು ಹಿಂಸೆಗೆ ಒಳಗಾಗಿದ್ದರು (ಇಬ್ರಿಯ 10:32-34). ಒಂದು ವೇಳೆ, ಹೊಸ ಒಡಂಬಡಿಕೆಯ ಇತರೆ ಕ್ರೈಸ್ತರಂತೆ ಹಿಂಸೆಗೆ ಒಳಗಾಗಿರಬಹುದು. ಅವರಿಗೆ "ವಿರುದ್ಧವಾಗಿ ಮಾತುಂಟಾಗಿತ್ತು" (ಅಪೊಸ್ತಲರ ಕೃತ್ಯಗಳು 28:22). ತಮ್ಮ ನಂಬಿಕೆಗಾಗಿ, ಅವರು ರಕ್ತ ಸುರಿಸದೆ ಇದ್ದರೂ, ಅಥವಾ ಮುಂದುವರೆದ "ಹಿಂಸೆಗಳ" ನಿಮಿತ್ತ ರಕ್ತ ಸಾಕ್ಷಿಗಳಾಗಿರಬಹುದು. ಕ್ರಿಸ್ತನ ನಿತ್ಯವಾದ ಮಹಿಮೆಯಲ್ಲಿ ಪಾಲುದಾರರಾಗುವ ಸಲುವಾಗಿ, ಅವರು ನಂಬಿಗಸ್ತರಾಗಿರಬೇಕಿತ್ತು.

ನಂಬಿಕೆಗೆ ತೊಂದರೆ ಉಂಟಾಗುವಾಗ, ನಾವುಗಳು ಸಹ ಕ್ರಿಸ್ತನನ್ನೇ ದೃಷ್ಟಿಸೋಣ. ನೀವು ಹೊಂದಿದ ಹಿಂಸೆ, ಸಮಸ್ಯೆ ಅಥವಾ ಶೋಧನೆಗಳು, ಏನೇ ಇರಲಿ ಅದು ಯೇಸುವಿನ ಬಾಧೆಗಳಿಗೆ ಸಮನಾಗಲಾರದು. ಇದರಲ್ಲಿ ಯೇಸು ಮನುಷ್ಯರನ್ನು ರಕ್ಷಿಸುವ, ದೇವರ ಚಿತ್ತವನ್ನೇ ನೆರವೇರಿಸಿರುವನು. ನಿಮ್ಮ ಮನಸ್ಸು ಯೇಸುವಿನ ಮೇಲಿದ್ದರೆ, ನೀವುಗಳು ಸ್ಥಿರಚಿತ್ತರಾಗಿರಲು ಸಾಧ್ಯವಿದೆ.

## ದೇವರು ತನ್ನ ಮಕ್ಕಳನ್ನು ಶಿಕ್ಷಿಸುತ್ತಾನೆ ಎಂಬುದನ್ನು ಜ್ಞಾಪಕಮಾಡಿಕೊಳ್ಳಿ

ಮೂರನೆಯದಾಗಿ, ಸಂಕಷ್ಟದ ಸಮಯಗಳ ಮುಖಾಂತರ, ದೇವರು ತನ್ನ ಮಕ್ಕಳನ್ನು ಶಿಕ್ಷಿಸುತ್ತಾನೆ (ಇಬ್ರಿಯ 12:5-11). ಇಬ್ರಿಯ ಪತ್ರಿಕೆಯ ಮೊದಲ ಓದುಗರು ಸಂದಿಗ್ಧ ಪರಿಸ್ಥಿತಿಯಲ್ಲಿದ್ದರು, ಹಿಂಸೆಯನ್ನು ಅನುಭವಿಸುತ್ತಿದ್ದರು. ಇದರ ಮೂಲಕ ದೇವರು ಅವರನ್ನು ತಿದ್ದುತ್ತಿದ್ದನು ಎಂಬ ತತ್ವವನ್ನು ಈ ವಾಕ್ಯಭಾಗದಲ್ಲಿ ತಿಳಿಸಲಾಗಿದೆ. ಈ ತಿದ್ದು ಪಾಟಿಯನ್ನು ಅವರು ನಾಲ್ಕು ಕಾರಣಗಳಿಂದ ಸ್ವಿಕರಿಸಬೇಕಾಯಿತು.

(1) ಶಿಕ್ಷೆ ದೇವರ ಪ್ರೀತಿಗೆ ಧೋತಕವಾಗಿದೆ, "ದೇವರು ತಾನು ಪ್ರೀತಿಸುವವರನ್ನು ಶಿಕ್ಷಿಸುತ್ತಾನೆ" (12:6).

(2) ಶಿಕ್ಷೆಯು, ದೇವರ ಮಕ್ಕಳು ಎಂಬುದಕ್ಕೆ ಸಾಕ್ಷಿಯಾಗಿದೆ: "ದೇವರ ಶಿಕ್ಷೆಗೆ ಒಳಗಾಗದವನು. ದೇವರ ಮಗುವಲ್ಲ" (12:7, 8).

(3) ದೇವರ ಶಿಕ್ಷೆಯನ್ನು ಸ್ವೀಕರಿಸುವದು ಯೋಗ್ಯವಾಗಿತ್ತು. ಲೌಕಿಕ ತಂದೆಗಳಿಂದ ಶಿಕ್ಷೆಯನ್ನು ಹೊಂದುತ್ತಿರುವಲ್ಲಿ ಪರಲೋಕದ ತಂದೆಯು ತಾನು ನೀಡುವ ಶಿಕ್ಷೆಯ ನಿಮಿತ್ತ ಉತ್ತಮವಾದ್ದನ್ನು ನೀಡುತ್ತಾನೆ (12:9, 10).

(4) ಶಿಕ್ಷೆಯಿಂದ ಜನರಿಗೆ ಒಳಿತಾಗುತ್ತದೆ. ಅದರ ನಿಮಿತ್ತ ಜನರು ದೇವರ "ಪರಿಶುದ್ಧತೆಯಲ್ಲಿ ಪಾಲುಗಾರರಾಗಲು" ಸಾಧ್ಯವಿದೆ (12:10). ಅದು "ನೀತಿಯೆಂಬ ಫಲವನ್ನು"

ಉಂಟುಮಾಡುತ್ತದೆ (12:11).

ತಪ್ಪಿಲ್ಲದ ಶಿಕ್ಷೆಯನ್ನು ಹೊಂದುವಾಗಲು, ಅದರ ನಿಮಿತ್ತ ದೇವರು ಒಳಿತನ್ನು ಮಾಡುವನು ಎಂಬ ಸಾರಾಂಶವನ್ನು ನೀಡಲಾಗಿದೆ. ದುಃಖ ಕಷ್ಟ ಹಾಗೂ ಹಿಂಸೆಯ ನಿಮಿತ್ತ, ದೇವರ ಚಿತ್ತವನ್ನು ಸ್ವೀಕರಿಸಿ, ಇತರರ ಸಂಕಷ್ಟಗಳನ್ನು ಸಹ ಅರಿತು ಕೊಳ್ಳಲು ಸಹಾಯವಾಗುತ್ತದೆ. ನಾವು ಪರಿಪಕ್ವತೆಗೆ ಬರಬೇಕೆಂದು ಶಿಕ್ಷೆಯ ಉಂಟಾಗುವದಾದರೆ, ಕಷ್ಟ ಉಂಟಾಗುವಾಗ ಅಧಿಕ ನಂಬಿಕೆಯಿಂದ ದೃಢವಾಗಿರಲು ಸಾಧ್ಯವಾಗುತ್ತದೆ.

## ನಮ್ಮ ನಿರ್ಣಯಗಳನ್ನು ಬಲಪಡಿಸೋಣ

ನಾಲ್ಕನೆಯದಾಗಿ, ನಾವು ಸ್ಥಿರವಾಗಿರಲು, ನಮ್ಮ ನಿರ್ಣಯಗಳನ್ನು ಬಲಪಡಿಸಿಕೊಳ್ಳ ಬೇಕು. (ಇಬ್ರಿಯ 12:12-17.) ನನ್ನ ಆತ್ಮೀಕ ವಿಷಯದ ಬಗ್ಗೆ ಇಬ್ರಿಯ 12:12 ತಿಳಿಸುತ್ತದೆ. ನನ್ನ ಸಂಕಷ್ಟದ ಸಮಯದಲ್ಲಿ ಅದು ನನ್ನ ಸಂದೇಹಗಳನ್ನು ನಿವಾರಣೆ ಮಾಡುತ್ತದೆ. ಆ ಸಮಯದಲ್ಲಿ ನಾನು ಪ್ರತಿರೋಧವನ್ನಾಗಲೀ, ಕೋಪವನ್ನಾಗಲೀ ಹೊಂದಿರದೆ, ಹಳೆಯ ನೆನಪು ಮಾತ್ರವಾಗಿರುತ್ತದೆ. ಆ ಸಮಯದಲ್ಲಿ ನಾನು "ಜೋಲುಬಿದ್ದ ಕೈಗಳನ್ನೂ" "ನಡುಗುವ ಮೊಣಕಾಲುಗಳನ್ನೂ" - ಆತ್ಮಿಕವಾಗಿ ಮಾತನಾಡುವಂತೆ ನಾನು ಅಸ್ವಸ್ಥನಾಗಿ ಸೋಮಾರಿಯಾಗಿದ್ದೇನೆ. ನೀನು ಯಾವಾಗಲಾದರು ಅಂತಹ ಅನುಭವವನ್ನು ಹೊಂದಿರುವೆಯೋ?

ಇದರ ಬಗ್ಗೆ ನಾವೇನು ಮಾಡೋಣ? ಇಬ್ರಿಯ 12:12ರಲ್ಲಿ, "ಆದ್ದದರಿಂದ ಜೋಲುಬಿದ್ದ ಕೈಗಳನ್ನು ನಡುಗುವ ಮೊಣಕಾಲುಗಳನ್ನು ಸುಧಾರಿಸಿಕೊಳ್ಳಿರಿ" ಎಂದು ಬರೆದದೆ. ಆದರ ಇನ್ನೊಂದು ಅರ್ಥವೇನೆಂದರೆ, "ಬಲಹೀನವಾದ ಕ್ರೈಸ್ತ ಜೀವಿತವನ್ನು ಸುಧಾರಿಸಿ ಕೊಳ್ಳಿರಿ" ಎಂಬದೆ. ಹೌದು ನಾವು ಬಲವುಳ್ಳವರಾಗಬೇಕೆಂಬ ನಿರ್ಣಯವನ್ನು ಮಾಡಲೇಬೇಕು: "ಇಂದಿನಿಂದ ನಾನು ಬಲವಾಗಿ ಮುಂದೆ ಸಾಗುತ್ತೇನೆ! ಮತ್ತು ದೇವರಿಗೆ ಸಮರ್ಪಿಸಿಕೊಂಡ ಜೀವಿತವನ್ನು ಜೀವಿಸುತ್ತೇನೆ!"

ದೇವರನ್ನು ಹಿಂಬಾಲಿಸುವ ಕುರಿತು ನೂತನ ನಿರ್ಣಯಗಳನ್ನು ಮಾಡುವಲ್ಲಿ: (1) ಎಲ್ಲರೊಂದಿಗೆ ಸಮಾಧಾನದಿಂದಿರಬೇಕು. (2) "ಪರಿಶುದ್ಧತೆಗಾಗಿ" ತವಕಿಸಬೇಕು. (3) ಯಾವುದೇ ವಿಧವಾದ "ಕಹಿಯಾದ" ಬೇರುಗಳಿರಬಾರದು - ಅದು ನಾವು ಹೊಂದಿರುವ ಸ್ವಾಸ್ಥ್ಯವನ್ನು ಕಳಕೊಳ್ಳುವಂತೆ ಮಾಡುತ್ತದೆ. (4) ಅನೈತಿಕ ಜೀವನದಿಂದ ದೂರವಿರಬೇಕು. (5) ಏಸಾವನಂತೆ, ತಾತ್ಕಾಲಿಕವಾದ ಆಶೆಗಳ ನಿಮಿತ್ತ ನಿತ್ಯವಾದದ್ದನ್ನು ಕಳಕೊಳ್ಳಬಾರದು. ಕ್ರಿಸ್ತ ಯೇಸುವಿನಲ್ಲಿ ನಂಬಿಗಸ್ತರಾಗಿ ಮುಂದುವರೆಯಲು ಸ್ಥಿರವಾದ ನಿರ್ಣಯಗಳನ್ನು ನಾವುಗಳು ಮಾಡಿಕೊಂಡಿರಬೇಕು!

ಮಹತ್ವದ ಜ್ಞಾನ ಹಾಗೂ ತಲಾಂತುಗಳನ್ನು ಹೊಂದಿರುವವರು ಮಾತ್ರ ಜೀವನದಲ್ಲಿ ಯಶಸ್ಸನ್ನು ಗಳಿಸುವದಿಲ್ಲ ಎಂಬದನ್ನು ನಾವು ಗಮನಿಸಿದ್ದೇವಲ್ಲವೇ? ನಾನು ಪ್ರಾಧ್ಯಾಪಕನಾಗಿ ಇದನ್ನು ಗಮನಿಸಿರುವೆನು: ಉತ್ತಮವಾದ ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ದೊಡ್ಡ ಯಶಸ್ಸನ್ನು ಸಾಧಿಸಿರುವದಿಲ್ಲ. ಮಧ್ಯಮ ವರ್ಗದಲ್ಲಿದ್ದ ವಿದ್ಯಾರ್ಥಿಗಳು ತಮ್ಮ ಉತ್ತಮವಾದ ಪ್ರಯತ್ನದಿಂದ ಉತ್ತಮವಾದ ಸಾಧನೆಯನ್ನು ಮಾಡಿರುವರು. ಆತ್ಮಿಕ ವಿಷಯಗಳಲ್ಲಿ ಯಶಸ್ಸು ಸಾಧಿಸಬೇಕಾದರೆ, ನಾವು ಉತ್ತಮವಾದ ನಿರ್ಣಯಗಳನ್ನು ಮಾಡಲೇಬೇಕು - ದೇವರ ಚಿತ್ತವನ್ನು ಮಾಡುವ ದೃಢ ನಿರ್ಧಾರಗಳು ನಮ್ಮಲ್ಲಿ ಇರಬೇಕು!

## ನಮಗಿರುವ ಮಹತ್ವದ ಅವಕಾಶಗಳನ್ನು ನೆನಪುಮಾಡಿರಿ

ಐದನೆಯದಾಗಿ, ನಾವು ನಂಬಿಕೆಯಲ್ಲಿ ಸದೃಢರಾಗಬೇಕಾದರೆ, ನಮಗಿರುವ ವಿಶೇಷ ಅವಕಾಶಗಳನ್ನು ನೆನಪು ಮಾಡಿಕೊಳ್ಳಬೇಕು. ಇಬ್ರಿಯ 12:18-29ರಲ್ಲಿ ಹಳೆ ಮತ್ತು ಹೊಸ

ಒಡಂಬಡಿಕೆಯ ನಡುವೆ ಇರುವ ವ್ಯತ್ಯಾಸಗಳನ್ನು ನೆನಪು ಮಾಡಿಕೊಳ್ಳುವದು ಲೇಸು. "ಮುಟ್ಟುವದಕ್ಕೆ ಸಾಧ್ಯವಾದಂಥ ಬೆಂಕಿ ಹತ್ತಿದಂಥ ... ಮೊಬ್ಬಿಗೂ (ಸೀನಾಯಿ) ಕತ್ತಲೆಗೂ ಬಿರುಗಾಳಿಗೂ" ಎಂಬ ನಿಯಮಾವಳಿಯನ್ನು ಪಡೆದ ಬೆಟ್ಟದ ಕುರಿತು ಬರಹಗಾರನು ತಿಳಿಸಿದನು (ವಿಮೋಚನಕಾಂಡ 19; 20; ಧರ್ಮೋಪದೇಶ ಕಾಂಡ 4; 5). "ನೀವು ಈ (ವಿಧವಾದ ಬೆಟ್ಟದ) ಬಳಿಗೆ ಬಾರದೆ" ಅಂತಹ ವಿಧವಾದ ಒಡಂಬಂಡಿಕೆಗೆ ಒಳಪಟ್ಟವರಲ್ಲ, ಆ ನಿಯಮಗಳು ನಮಗೆ ಅನ್ವಹಿಸುವದಿಲ್ಲ ಎಂದಿರುವನು.

ಹಾಗಾದರೆ ನಾವು ಯಾವುದರ ಬಳಿಗೆ ಬಂದಿದ್ದೇವೆ? "ನಾವು ಚೀಯೋನ್ ... ಹಾಗೂ ಜೀವವುಳ್ಳ ದೇವ ಪಟ್ಟಣಕ್ಕೂ, ಪರಲೋಕದ ... ಯೆರೂಸಲೇಮಿಗೂ ದೇವ ದೂತರ ಸಂಘಕ್ಕೂ - ನ್ಯಾಯಾಧಿಪತಿಯಾದ ದೇವರ ಬಳಿಗೂ, ನೀತಿವಂತರ ಆತ್ಮದ ಬಳಿಗೂ ಬಂದಿದ್ದೇವೆ. ಯೇಸುವಿನ ಹಾಗೂ ಪ್ರೋಕ್ಷಿತವಾದ ರಕ್ತದ ಬಳಿಗೂ ಬಂದಿದ್ದೇವೆ!"

ಹಳೆ ಮತ್ತು ಹೊಸದರ ನಡುವೆ ಇರುವ, "ಕದಲುವ" ಹಾಗೂ ತೆಗೆದು ಹಾಕಲ್ಪಡುವ ಹಾಗೂ ಹೊಸ ಒಡಂಬಡಿಕೆಯಲ್ಲಿನ "ಕದಲಿಸಲಾರದ ರಾಜ್ಯದ ಬಗ್ಗೆ ತಿಳಿಸಲಾಗಿದೆ" (12:28). ಇದರಲ್ಲಿ ಪ್ರಮುಖವಾದ ಮೂರು ಅಂಶಗಳನ್ನು ಬರಹಗಾರನು ತಿಳಿಸಿರುವನು.

(1) *ಧರ್ಮಶಾಸ್ತ್ರಕ್ಕೆ ಒಳಗಾದವರಿಗಿಂತಲೂ, ಅವರು ಉತ್ತಮರೆ ಹೇಗೆಂದರೆ ಅವರು ಬೆಟ್ಟದಲ್ಲಿದ್ದ ದೇವರ ಬಳಿಗೆ ಬರುವದು ಅಸಾಧ್ಯವಾಗಿತ್ತು.* ಆದರೆ ಹೊಸ ನಿಯಮದ ಪ್ರಕಾರ, ಜನರು ದೇವರ ಹಾಗೂ ಪರಲೋಕ ಸಂಘದವರ ಬಳಿಗೆ ಪ್ರವೇಶ ಮಾಡುವ ಹಕ್ಕನ್ನು ಅವರು ಹೊಂದಿದ್ದರು.

(2) *ಅವರು ಎಷ್ಟು ವಿಧವಾದ ಅವಕಾಶಗಳನ್ನು ಹೊಂದಿದ್ದರು.* ಅವರು ಭೂಲೋಕದವರಾಗಿದ್ದರೂ, ಮತ್ತೊಂದು ಲೋಕದ ಭಾಗಿಗಳಾಗಿದ್ದರು-ಪರಲೋಕ ಸಂಸ್ಥಾನದ ಒಂದು ಭಾಗವಾಗಿದ್ದರು. ಅವರು ಕ್ರೈಸ್ತರೊಂದಿಗೂ, ನೀತಿವಂತರೊಂದಿಗೂ, ರಕ್ಷಿಸಲ್ಪಟ್ಟ ರಕ್ತದೊಂದಿಗೂ, ಅವರನ್ನು ಕೊಂಡುಕೊಂಡ ಕರ್ತನೊಂದಿಗೂ ಸಕಲರಿಗೂ ನ್ಯಾಯ ತೀರಿಸುವ ದೇವರೊಂದಿಗೂ, ದೇವದೂತರೊಂದಿಗೂ ಈಗಾಗಲೇ ಪಾಲುಗಾರರಾಗಿದ್ದರು, ಅದಕ್ಕಾಗಿ ನಾವುಗಳು ಕಾಯುವ ಅಗತ್ಯವಿರಲಿಲ್ಲ.

(3) *ಕದಲುವ ಒಡಂಬಡಿಕೆ ಹಾಗೂ ಕದಲಲಾರದ ಒಡಂಬಡಿಕೆಯು ಯಾವ ಮಟ್ಟವನ್ನು ಹೊಂದಿದ್ದವು!* 10:9 ರಂತೆ, "ಆತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ." ಆತನಾದರೋ ಸದಾಕಾಲವಿರುವದರಿಂದ ಆತನ ಯಾಜಕತ್ವವು ಮತ್ತೊಬ್ಬರಿಗೆ ಹೋಗುವಂಥದ್ದಲ್ಲಾ (7:24). ಹಳೆಯದನ್ನು ತೆಗೆದು ಹಾಕುವ ವಿಚಾರದಲ್ಲಿ "ಹಳೆಯ" "ಪೂರ್ವಕಾಲದ" "ಹೊಸ" ಹಾಗೂ "ಉತ್ತಮ" ಎಂಬ ಪದಗಳನ್ನು ಗಮನಿಸಿರಿ.

ಇಂತಹ ಆಶೀರ್ವಾದಗಳನ್ನು ಆ ಓದುಗರು ಹೊಂದಿದ್ದರಿಂದ, ಅವರು ಯೇಸುವಿಗಾಗಿ ಮಾತ್ರ ಜೀವಿಸಬೇಕಿತ್ತು. ಈ ಸಂದೇಶವು ಅವರನ್ನು ತಲುಪದೆ ಇರುವಾಗ, ಬರಹಗಾರನು ಇನ್ನೊಂದು ಅಂಶವನ್ನು ತಿಳಿಸಿದನು. ಮಹತ್ವದ ಆಶೀರ್ವಾದದೊಂದಿಗೆ ಮಹತ್ವದ ಹೊಣೆಗಾರಿಕೆಯೂ ಇರುತ್ತದೆ. ಕ್ರೈಸ್ತರಾದ ನಮಗೆ ವಿಶೇಷವಾದ ಅವಕಾಶಗಳು ಇರುವದಾಗಿದ್ದು ಒಂದು ವೇಳೆ ನಾವು ದೇವರ ಚಿತ್ತವನ್ನು ನಡೆಸುವಲ್ಲಿ ವಿಫಲರಾದರೆ ಶಿಕ್ಷೆಯು ಖಂಡಿತವಾಗಿರುತ್ತದೆ: "ಮಾತನಾಡುತ್ತಿರುವವನಿಗೆ ಅವಿಧೇಯರಾದರೆ"; "ಆತನು ದಹಿಸುವ ಅಗ್ನಿಯಾಗಿದ್ದಾನೆ" (12:25, 29). ನಾವು ಸ್ವೀಕರಿಸಿರುವ ಆಶೀರ್ವಾದಗಳನ್ನು ಅಲಕ್ಷ ಮಾಡಿದರೆ, ಗಂಭೀರವಾದ ಶಿಕ್ಷೆಗೆ ಪಾತ್ರರಾಗುತ್ತೇವೆ (2:1-3; 10:28, 29).

ಈ ವಿಶೇಷವಾದ ಆಶೀರ್ವಾದಗಳ ನಿಮಿತ್ತ, ನಾವು ಹೆಚ್ಚು ಜವಾಬ್ದಾರಿಯುಳ್ಳವರಾಗಿದ್ದೇವೆ! ಆತನ ಆಶೀರ್ವಾದವನ್ನು ನಾವುಗಳು ಗ್ರಹಿಸುವಲ್ಲಿ ವಿಫಲರಾದರೆ, ಗಂಭೀರ ಶಿಕ್ಷೆಗೆ ಒಳಗಾಗಬೇಕಾಗುತ್ತದೆ!

## ಮುಕ್ತಾಯ

ಮುಂದಿನ ತಿಂಗಳು ಹಾಗೂ ವರ್ಷಗಳಲ್ಲಿ, ನಾವುಗಳು ಬೀಳದಂತೆ ಎಚ್ಚರವಾಗಿರಲು ಯಾವ ಸಂಗತಿಗಳು ನಮಗೆ ಸಹಾಹಿಸುತ್ತವೆ? ನಾವು ಹೇಗೆ ಸ್ಥಿರಚಿತ್ತರಾಗಿ ಮುಂದಾಗುವ ಸಾಧ್ಯತೆಗಳಿವೆ? ಈ ಮುಂದಿನ ಅಂಶಗಳು ನಮಗೆ ಸಹಾಹಿಸುತ್ತವೆ: ಸಹನೆಯನ್ನು ಅಭ್ಯಾಸಮಾಡಿ ಯೇಸುವಿನಲ್ಲಿ ದೃಷ್ಟಿ ಇಡಬೇಕು, ಹಾಗೂ ದೇವರು ತನ್ನ ಮಕ್ಕಳನ್ನು ಶಿಕ್ಷಿಸುತ್ತಾನೆ ಎಂಬುದನ್ನು ಅರಿಯಬೇಕು. ಕ್ರೈಸ್ತರಿಗಿರುವ ಅವಕಾಶಗಳನ್ನು ನೆನಪುಮಾಡಿ, ನಂಬಿಗಸ್ತಿಕೆಯಿಂದ ದೇವರ ಸೇವೆ ಮಾಡೋಣ. ಅಂತಿಮವಾಗಿ, ನಂಬಿಗಸ್ತರಾಗಿರುವ ವಿಚಾರದಲ್ಲಿ ಅಂತಿಮ ನಿರ್ಣಯವನ್ನು ಮಾಡಬೇಕು, ನಮ್ಮ ನಿರ್ಣಯಗಳು ನಮ್ಮ ಸಭೆ, ನಮ್ಮ ಹಿರಿಯರು, ಸಭಾನಾಯಕರನ್ನು ಪ್ರಸಂಗಿಗಳನ್ನೂ, ಬೈಬಲ್ ಸ್ಕೂಲ್ ಬೋಧಕರನ್ನು ಅಥವಾ ನಮ್ಮ ತಂದೆತಾಯಿಗಳನ್ನು ಅವಲಂಭಿಸದೆ, ಅದು ನಮ್ಮ ಮೇಲೆಯೇ ಅವಂಭಿತವಾಗಿರುತ್ತದೆ!

ಕ್ರೈಸ್ತರ ಯಶಸ್ಸಿನ ಬಗ್ಗೆ ಡಾನ್ ಮೊರಿಸ್‌ರವರ ವರ್ತನೆಯನ್ನು ಗಮನಿಸೋಣ. ಅಭಿಲೇನ್ ಕ್ರಿಶ್ಚಿಯನ್ ಕಾಲೇಜಿನಲ್ಲಿ ಉದ್ಭವಿಸಿದ್ದ ಒಂದು ಗೊಂದಲದ ಬಗ್ಗೆ ಗಮನಿಸೋಣ. ಆ ಸಮಯದಲ್ಲಿ ಮೊರಿಸ್‌ರವರು ಕ್ಯಾಂಪಸ್‌ನ ಅಧ್ಯಕ್ಷರಾಗಿದ್ದು, ಈ ಗೊಂದಲದ ಬಗ್ಗೆ ನಿಂತುಕೊಂಡು ಒಂದು ನಿರ್ಣಯವನ್ನು ಮಂಡಿಸಿದರು. ತದನಂತರ ಅವರು: "ಎಲ್ಲಿಯವರೆಗೂ ಸಂಘದ ಸದಸ್ಯರು, ಕೆಲಸಗಾರರು ಹಾಗೂ ವಿದ್ಯಾರ್ಥಿಗಳು ನ್ಯಾಯದ ಕಡೆಗೆ ನಿಂತುಕೊಳ್ಳುತ್ತಾರೋ ಅವರೊಂದಿಗೆ ನ್ಯಾಯಕ್ಕಾಗಿ ನಾನು ಸಹ ನಿಂತುಕೊಳ್ಳುತ್ತೇನೆ ಅಂದರು. ಒಂದು ವೇಳೆ ಇವರೆಲ್ಲರೂ ನ್ಯಾಯಕ್ಕಾಗಿ ನಿಲ್ಲದೆ ಹೋದರೆ, ನಾನು ನ್ಯಾಯಕ್ಕಾಗಿ ಏಕಾಂಗಿಯಾಗಿ ನಿಂತುಕೊಳ್ಳುತ್ತೇನೆ ಅಂದರು!"

ಈ ವಿಧವಾದ ಮನವರಿಕೆಯನ್ನು ಒಪ್ಪಿಕೊಳ್ಳುವಿರಾ? ನೀವು ಏಕಾಂಗಿಗಳಾಗಿದ್ದರೂ, ನ್ಯಾಯಕ್ಕಾಗಿ ನಿಂತುಕೊಳ್ಳುವಿರಾ? ಸಭೆಯು, ಒಂದು ಬೆಂಕಿಯುಳ್ಳ ವೈರಿಗಳ ಸೈನ್ಯದ ಮುಂದೆ ನಿಂತಿರುತ್ತದೆ. ನಿಮ್ಮ ಸುತ್ತಲೂ ಇರುವ ಸ್ತ್ರೀ ಪುರುಷರು ಕದಲಿ, ಬಿದ್ದು ಹೋಗುವಾಗ, ನೀವುಗಳು ಸಹ ಅವರಂತೆ ಆಗುವಿರಾ ಅಥವಾ ನಂಬಿಕೆಯನ್ನು ದೃಢವಾಗಿ ಹಿಡಿದುಕೊಳ್ಳುವಿರಾ?